(ಇಂದು ದಿನಾಂಕಃ 16-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

<u>**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಮ.ಎಸ.ಎಸ ವಕೀಲರಿಂದ ಃ**</u>

1. ನಾನು ಈ ಮೊದಲು ನನ್ನ ಪಾಟೀ ಸವಾಲಿನಲ್ಲಿ ನಾನು ಸ್ವಾಧೀನದಲ್ಲಿ ಇರುವ ಜಮೀನಿನ ಪೂರ್ವಕ್ಕೆ ಹಣಮಂತಪ್ಪ ಬಂಡಪ್ಪ , ಪಶ್ಚಿಮಕ್ಕೆ ಘಟ್ಟ , ಉತ್ತರಕ್ಕೆ ಘಟ್ಟ ಮತ್ತು ದಕ್ಷಿಣಕ್ಕೆ ವಾರಿ ಇದೆ ಎಂದು ಹೇಳಿರುವುದು ಸರಿ ಇರುತ್ತದೆ. ನಾನು ಹೇಳುತ್ತಿರುವ ಚರ್ತುರ ಸೀಮೇ ಜಮೀನಿನಲ್ಲಿ ಸ್ವಾಧೀನದಲ್ಲಿ ನಾನು ಸುಮಾರು 40-50 ವರ್ಷಗಳಿಂದ ಇದ್ದೇನೆ. ನಾನು ಹೇಳುತ್ತಿರುವ ಚರ್ತುರ ಸೀಮೇ ಜಮೀನಿನ ವಿಸ್ತೀರ್ಣ ಎಷ್ಟು ಇದೆ ಎಂದರೆ ಸಾಕ್ಷಿ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ ಅಳತೆ ಮಾಡಿಸಿಲ್ಲ ಎಂದು ಹೇಳುತ್ತಾರೆ. ನಾನು ಹೇಳುತ್ತಿರುವ ಚರ್ತುರ ಸೀಮೇ ಜಮೀನನ್ನು ಹೊರತುಪಡಿಸಿ ಬೇರೆ ಜಮೀನಿಗೆ ಮತ್ತು ನನಗೆ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿ. ನಾನು ಹೇಳುತ್ತಿರುವ ಚರ್ತುರ ಸೀಮೇ ಜಮೀನು ಯಾವ ಸರ್ವೆ ನಂಬರಗೆ ಬರುತ್ತದೆ ಎಂದು ನಾನು ಅಳತೆ ಮಾಡಿಸಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂಬರ 44 ರಲ್ಲಿ ನಾನು ಕಬ್ಜೆಯಲ್ಲಿ ಇದ್ದೇನೆ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ಯಾವ ಸರ್ವೆ ನಂಬರ ಜಮೀನಿನ ಸ್ವಾಧೀನದಲ್ಲಿ ಇದ್ದೇನೆ ಎಂದು ತಿಳಿದುಕೊಳ್ಳಲು ಅಳತೆ ಮಾಡಿದರೆ ತಿಳಿಯುತ್ತದೆ ಎಂದರೆ ಸಾಕ್ಷಿ ಅಳತೆ ಮಾಡಿಸಿ ಎಂದು ಹೇಳುತ್ತಾರೆ. ನಾನು ಹೇಳುತ್ತಿರುವ ಚರ್ತುರ ಸೀಮೇ ಜಮೀನು ಅಳತೆ ಮಾಡಿ ನೋಡಿದರೆ ನಾನು ಯಾವ ಜಮೀನಿನ ಸ್ವಾಧೀನದಲ್ಲಿ ಇದ್ದೇನೊ ಅದೇ ಸರ್ವೆ ನಂಬರನಲ್ಲಿ ಇರಲು ತಯ್ಯಾರಿದ್ದಿರಾ ಎಂದರೆ ಸಾಕ್ಷಿ ನಾವು ಸರ್ವೆ ನಂಬರ 44 ರ ಸ್ವಾಧೀನದಲ್ಲಿ ಇದ್ದೆವೆ ಎಂದು ಹೇಳುತ್ತಾರೆ. ಸರ್ವೆ ನಂಬರ 44 ರ ಜಮೀನು ನನಗೆ ಹಾಗೂ ನನ್ನ ಕುಟುಂಬಕ್ಕೆ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸಾಕ್ಷಿ ನನ್ನ ಮುತ್ಯಾ ಖರೀದಿಸಿರುವ ಆಸ್ತಿ ಇರುತ್ತದೆ ಎಂದು ಹೇಳುತ್ತಾರೆ. ಸರ್ವೆ ನಂಬರ 44 ರ 7 ಎಕರೆ 18 ಗುಂಟೆ ಜಮೀನಿನ ಸ್ವಾಧೀನದಾರರು ಪ್ರತಿವಾದಿಯರು ಇರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ 44 ರ 7 ಎಕರೆ 18 ಗುಂಟೆ ಜಮೀನಿನ ಮಾಲಿಕ ಮತ್ತು ಸ್ವಾಧೀನದಿಂದ ನನಗೆ ಯಾವುದೇ ಸಂಬಂಧ ಇಲ್ಲದಿದ್ದರು ಸಹ ಸ್ವಾಧೀನ ಬದಲಾವಣೆ ಮಾಡಿಕೊಳ್ಳುವ ಉದ್ದೇಶದಿಂದ ನಾನು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ

ಸರಿಯಲ್ಲ. ನನ್ನ ತಂದೆ ಬಂದು ಸಾಕ್ಷ ಕೊಟ್ಟರೆ ನಿಜ ಹೊರಬರುತ್ತದೆ ಎಂಬ ಉದ್ದೇಶದಿಂದ ನಾನು ಬಂದು ಸಾಕ್ಷ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.